ಪಿ ಡಬ್ಲ್ಯೂ.2: ಲಕ್ಷ್ಮಿ ಟಿ. ಎನ್ .,

**ದಿನಾಂಕ:15.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಿಂದ:**

ನನ್ನ ಸಾಕ್ಷಿ ವಿಚಾರಣೆ, ಹೇಳಿಕೆ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ಓದಿ, ತಿಳಿದುಕೊಂಡು ಸಹಿ ಮಾಡಿರುತ್ತೇನೆ. ಅದರಲ್ಲಿ ಬರೆದಿರುವ ವಿಷಯ ಎಲ್ಲಾ ಸತ್ಯವಾಗಿರುತ್ತದೆ. ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

| |
|---|
| Authorization letter ಅನ್ನು ಹಾಜರುಪಡಿಸುತ್ತಿದ್ದು ಅದನ್ನು **ನಿ.ಪಿ.15** ಎಂದು, |
| ಪೊಲೀಸ್ ಇಂಟಿಮೇಶನ್ ಅನ್ನು ಹಾಜರುಪಡಿಸುತ್ತಿದ್ದು ಅದನ್ನು **ನಿ.ಪಿ.16** ಎಂದು, |
| ಎಂ.ಎಲ್.ಸಿ ಎಕ್ಸ್‌ಟ್ರಾಕ್ಟನ್ನು ಹಾಜರುಪಡಿಸುತ್ತಿದ್ದು ಅದನ್ನು **ನಿ.ಪಿ.17** ಎಂದು, |
| ಕೇಸ್ ಶೀಟ್ ಅನ್ನು ಹಾಜರುಪಡಿಸುತ್ತಿದ್ದು ಅದನ್ನು **ನಿ.ಪಿ.18** ಎಂದು ಗುರುತಿಸಲಾಯಿತು. |

**ಪಾಟೀ ಸವಾಲು: 2 ನೇ ಎದುರುದಾರರ ಪರ ವಕೀಲರಿಂದ:**

ಎಂ.ಎಲ್.ಸಿಯನ್ನು ಯಾರು ನೊಂದಣಿ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಗಾಯಾಳು ಯಾವಾಗ ಆಸ್ಪತ್ರೆಗೆ ದಾಖಲಾಗಿದ್ದು ಎಂದು ನನಗೆ ಗೊತ್ತಿಲ್ಲ. ನೀವು ಹಾಜರುಪಡಿಸಿರುವ ದಾಖಲೆಗಳ ಪ್ರಕಾರ ಗಾಯಾಳು ಸ್ವತಃ ಬಿದ್ದು ಗಾಯಪಡಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗಾಯಾಳುವಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**(ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು